**4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ**
**ಬೆಂಗಳೂರು**

**ಸಿಸಿ ನಂ. 13654/2019 ಚಾಸಾಃ 1 ಪ್ರಾಸಾಃ 1**

**ಸಾಕ್ಷಿಯನ್ನು ದಿಃ 28.01.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸಾ.ಸ.ಅ ರವರಿಂದಃ-**

ನನ್ನಿಂದ ಆರೋಪಿ 17 ಲಕ್ಷ ರೂಗಳನ್ನು ಪಡೆದ ನಂತರ ಸುಮಾರು 6-7 ತಿಂಗಳು ಕಳೆದ ನಂತರವು ಆರೋಪಿ ಯಾವುದೇ ಬಡ್ಡಿ ಹಣವನ್ನು ಮರು ಪಾವತಿ ಮಾಡಿರುವುದಿಲ್ಲ. ನನಗೆ ಆರೋಪಿಯ ಬಗ್ಗೆ ಸಂಶಯ ಉಂಟಾಗಿ ನನ್ನ ಹಣವನ್ನು ವಾಪಸ್ಸು ಕೊಡುವಂತೆ ಕೇಳಿರುತ್ತೇನೆ. ನವೆಂಬರ್-2016 ರಲ್ಲಿ ಆರೋಪಿ ಬಸವೇಶ್ವರನಗರ ಬ್ಯಾಂಕ್ ಆಫ್ ಇಂಡಿಯಾ ಬಳಿ ತನಗೆ ಸೇರಿದ ಒಂದು ಚೆಕ್ ಅನ್ನು ನೀಡಿ 2 ಲಕ್ಷದ 25 ಸಾವಿರ ರೂಗಳನ್ನು ನಗದೀಕರಣ ಮಾಡಿಕೊಳ್ಳುವಂತೆ ತಿಳಿಸಿದರು. ನಾನು ಸದರಿ ಚೆಕ್ ಅನ್ನು ಎರಡು ವಾರಗಳ ನಂತರ ಬ್ಯಾಂಕ್‌ಗೆ ಸಲ್ಲಿಸಿದ್ದು ಅದು ಸಾಕಷ್ಟು ಹಣ ಇರುವುದಿಲ್ಲವೆಂದು ವಾಪಸ್ಸು ಬಂದಿರುತ್ತದೆ.

ನಂತರ ನಾನು ಆರೋಪಿಯನ್ನು ಭೇಟಿಯಾಗಿ ಚೆಕ್ ಬೌನ್ಸ್ ಆಗಿರುವುದಾಗಿ ತಿಳಿಸಿರುತ್ತೇನೆ. ನನ್ನ ಹಣವನ್ನು ಮರುಪಾವತಿ ಮಾಡುವಂತೆ ಒತ್ತಾಯ ಮಾಡಿರುತ್ತೇನೆ. ಆರೋಪಿಯು ನನ್ನ ವಿರುದ್ದವೇ ವಿಜಯನಗರ ಪೊಲೀಸ್ ಠಾಣೆಯಲ್ಲಿ ಒಂದು ಸುಳ್ಳು ದೂರನ್ನು ಸಲ್ಲಿಸಿದ್ದರು. ನಾನು ಪೊಲೀಸ್ ಠಾಣೆಗೆ ಹೋಗಿ ಆರೋಪಿ ಮೋಸ ಮಾಡಿರುವ ಬಗ್ಗೆ ತಿಳಿಸಿರುತ್ತೇನೆ. ಆರೋಪಿಯು ಪೊಲೀಸರ ಮುಂದೆ ನನ್ನ ಹಣವನ್ನು ಹಂತ ಹಂತವಾಗಿ ಮರು ಪಾವತಿ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ನನ್ನ ಹಣ ಪಾವತಿ ಮಾಡುವುದಾಗಿ ಒಪ್ಪಿ ಒಂದು ಕರಾರು ಪತ್ರವನ್ನು ಸಹ ಬರೆದುಕೊಟ್ಟಿರುತ್ತಾರೆ.

ನನ್ನಿಂದ ಹಣ ಪಡೆದು ಎರಡು ವರ್ಷ ಕಳೆದರು ಆರೋಪಿ ನನ್ನ ಹಣವನ್ನು ಮರು ಪಾವತಿ ಮಾಡಿರುವುದಿಲ್ಲ. ಈ ಬಗ್ಗೆ 2018 ರಲ್ಲಿ ಪವಿತ್ರ ಪ್ಯಾರಡೈಸ್

ಹೊಟೇಲ್ ಬಳಿ ನಾನು ಮತ್ತು ಆರೋಪಿ ಮಾತುಕತೆ ಆಡಿದ್ದು ಆರೋಪಿಯನ್ನು ನನ್ನ ಹಣ ವಾಪಸ್ಸು ಕೊಡುವಂತೆ ಕೇಳಿರುತ್ತೇನೆ. ಆಗ ಆರೋಪಿ ಜಮೀನು ಮತ್ತು ಮನೆ ಮಾರಾಟ ಮಾಡಿ ಹಣ ವಾಪಸ್ಸು ಕೊಡುವುದಾಗಿ ಒಪ್ಪಿಕೊಂಡಿರುತ್ತಾರೆ ಮತ್ತು ಪದೇಪದೇ ಫೋನ್ ಮಾಡದಂತೆ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆ. ಸ್ವಲ್ಪ ದಿನ ಕಳೆದರೂ ಸಹ ಆರೋಪಿ ಹಣವನ್ನು ಮರುಪಾವತಿ ಮಾಡದ ಕಾರಣ ನಾನು ಪೊಲೀಸ್ ಠಾಣೆಗೆ ಹೋಗಿ ಆರೋಪಿಯ ವಿರುದ್ದ ದೂರು ಸಲ್ಲಿಸಿರುತ್ತೇನೆ. ದೂರನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅದನ್ನು ನಿಪಿ-5 ಹಾಗೂ ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-5ಎ ಎಂದು ಗುರ್ತಿಸಲಾಯಿತು.

ದೂರು ಸಲ್ಲಿಸಿದ ಮರು ದಿನ ಪೊಲೀಸರು ಬಸವೇಶ್ವರನಗರದ ಸಹಕಾರಿ ಅಪೇಕ್ಸ್ ಬ್ಯಾಂಕ್ ಬಳಿ ಬಂದು ನಾನು ತೋರಿಸಿದ ಜಾಗದಲ್ಲಿ ಚಾಸಾ-4 ಮತ್ತು 5 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿರುತ್ತಾರೆ. ಅಲ್ಲಿಂದ ನಮ್ಮನ್ನು ಹಾವನೂರು ವೃತ್ತದಲ್ಲಿರುವ ಪವಿತ್ರ ಪ್ಯಾರಡೈಸ್ ಹೊಟೇಲ್ ಬಳಿ ಕರೆದುಕೊಂಡು ಹೋಗಿ ಅಲ್ಲಿಯೂ ಪರಿಶೀಲನೆ ಮಾಡಿರುತ್ತಾರೆ. ನಂತರ ನನ್ನನ್ನು ಪವಿತ್ರ ಪ್ಯಾರಡೈಸ್ ಹೊಟೇಲ್ ಬಳಿ ಇರುವ ಒಂದು ಫುಟ್ ಪಾತ್ ಬಳಿ ಪರಿಶೀಲಿಸಿ ಅಲ್ಲಿಯೂ ಸಹ ವೀಕ್ಷಣೆ ಮಾಡಿರುತ್ತಾರೆ. ಪಂಚನಾಮೆ ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ-6 ಹಾಗೂ ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-6ಎ ಎಂದು ಗುರ್ತಿಸಲಾಯಿತು. ಈ ಎಲ್ಲಾ ಸ್ಥಳಗಳನ್ನು ಪರಿಶೀಲಿಸಿದ ಬಗ್ಗೆ ಫೊಟೋಗಳನ್ನು ತೆಗೆದಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ 04 ಫೊಟೋಗಳನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅದನ್ನು ನಿಪಿ-7 ರಿಂದ 10 ಎಂದು ಗುರ್ತಿಸಲಾಯಿತು.

ಪಂಚನಾಮೆ ಮಾಡಿದ ಎರಡು ದಿನಗಳ ನಂತರ ನಾನು ಪೊಲೀಸರ ಮುಂದೆ ಆರೋಪಿ ಮಾತ್ರ ಮೋಸ ಮಾಡಿರುವುದಾಗಿ ಮುಂದುವರೆದ ಹೇಳಿಕೆ ಕೊಟ್ಟಿರುತ್ತೇನೆ.

ಆರೋಪಿಯು ನನಗೆ ನೀಡಿದ ಚೆಕ್ ಗಳು ಬೌನ್ಸ್ ಆಗಿರುವ ಸಂಬಂಧ ಸದರಿ ಚೆಕ್ ಗಳ ಆಧಾರದ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತೇನೆ. ಸದರಿ ಚೆಕ್ ಗಳ ಪ್ರತಿಯನ್ನು ಪೊಲೀಸರಿಗೆ ಕೊಟ್ಟಿದ್ದೆನು. 03 ಚೆಕ್ ಗಳ ಪ್ರತಿಯನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅವುಗಳನ್ನು ನಿಪಿ-11 ರಿಂದ 13 ಎಂದು ಗುರ್ತಿಸಲಾಯಿತು. 2017 ರಲ್ಲಿ ಆರೋಪಿ ಬರೆದುಕೊಟ್ಟ ಸಾಲದ ಕರಾರು ಪತ್ರವನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ಈ ಪತ್ರವನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅದನ್ನು ನಿಪಿ-14 ಎಂದು ಗುರ್ತಿಸಲಾಯಿತು.

ಪೊಲೀಸರು ಆರೋಪಿಯಿಂದ ಪ್ರಿಟಿಂಗ್ ಮೆಶಿನ್ ಮತ್ತು ಕಂಪ್ಯೂಟರ್ ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಿದ್ದರು. ಅವುಗಳಲ್ಲಿ ಕೆಲವೊಂದು ವಸ್ತುಗಳನ್ನು ನಾನು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಆದೇಶ ಪಡೆದು ಬಿಡುಗಡೆ ಮಾಡಿಕೊಂಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಆರೋಪಿಯ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**